All India Radio: Bangalore
National Bulletin In Kannada
18.01.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><*><><<>
ಮುಖ್ಯಾಂಶಗಳು

೧. ನವದೆಹಲಿಯಲ್ಲಿ ಇಂದಿನಿಂದ ತಿಂಗಳಾಂತ್ಯದವರೆಗೆ ಪಿಎಂ ವಿಶ್ವಕರ್ಮ ಹಾತ್ ೨೦೨೬ ಪ್ರದರ್ಶನ ಆಯೋಜಿಸಿರುವ ಎಮ್.ಎಸ್.ಎಮ್.ಇ

೨. ಪಶ್ಚಿಮ ಬಂಗಾಳದ ಮಾಲ್ಡಾದಲ್ಲಿ ದೇಶದ ಮೊಟ್ಟ ಮೊದಲ ವಂದೇ ಭಾರತ್ ಸ್ಲೀಪರ್ ಕೋಚ್ ರೈಲು ಲೋಕರ್ಪಣೆಗೊಳಿಸಿದ ಪ್ರಧಾನಿ ನರೇಂದ್ರ ಮೋದಿ

೩. ಭಾರತ-ಕೆನಡಾ ಆರ್ಥಿಕ ಪಾಲುದಾರಿಕೆಯನ್ನು ಬಲಪಡಿಸುವ ಕುರಿತು ಬ್ರಿಟಿಷ್ ಕೊಲಂಬಿಯಾದ ಕೆನಡಾದ ಪ್ರೀಮಿಯರ್ ಡೇವಿಡ್ ಎಬಿ ಅವರೊಂದಿಗೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಚರ್ಚೆ

೪. ಪುರುಷರ ಅಂಡರ್ ೧೯ ವಿಶ್ವಕಪ್ ಕ್ರಿಕೆಟ್; ಯುಎಸ್ಎ ತಂಡದ ವಿರುದ್ಧ ಭಾರತಕ್ಕೆ ಆರು ವಿಕೆಟ್ ಗಳ ಜಯ

<><><*><><<>

ಕೇಂದ್ರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಸಚಿವಾಲಯ-ಎಮ್.ಎಸ್.ಎಮ್.ಇ ನವದೆಹಲಿಯಲ್ಲಿ ಇಂದಿನಿಂದ ತಿಂಗಳಾಂತ್ಯದವರೆಗೆ ಪಿಎಂ ವಿಶ್ವಕರ್ಮ ಹಾತ್ ೨೦೨೬ ಪ್ರದರ್ಶನವನ್ನು ಆಯೋಜಿಸಿದೆ. ಕೇಂದ್ರ ಎಂ.ಎಸ್.ಎಂ.ಇ ಸಚಿವ ಜಿತನ್ ರಾಮ್ ಮಾಂಝಿ ಪ್ರದರ್ಶನವನ್ನು ಉದ್ಘಾಟಿಸಲಿದ್ದು, ಎಂ.ಎಸ್.ಎಂ.ಇ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಉಪಸ್ಥಿತರಿರಲಿದ್ದಾರೆ. ಕುಶಲಕರ್ಮಿಗಳು ತಮ್ಮ ಕರಕುಶಲ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖರೀದಿದಾರರು, ಪಾಲುದಾರರು ಮತ್ತು ಸಾರ್ವಜನಿಕರಿಗೆ ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಪ್ರಮುಖ ವೇದಿಕೆಯನ್ನು ಒದಗಿಸುವ ಜೊತೆಗೆ ಪ್ರಧಾನಮಂತ್ರಿ ವಿಶ್ವಕರ್ಮ ಹಾತ್ ೨೦೨೬, ಭಾರತದ ಶ್ರೀಮಂತ ಸಾಂಪ್ರದಾಯಿಕ ಕರಕುಶಲ ಪರಂಪರೆಯನ್ನು ಆಚರಿಸುವ ಮತ್ತು ಪ್ರದರ್ಶಿಸುವ ಗುರಿಯನ್ನು ಹೊಂದಿದೆ. ದೇಶಾದ್ಯಂತದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ೧೧೭ ಕ್ಕೂ ಹೆಚ್ಚು ಕುಶಲಕರ್ಮಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಇದು ಭಾರತದಾದ್ಯಂತದ ವೈವಿಧ್ಯಮಯ ಸಾಂಪ್ರದಾಯಿಕ ಕೌಶಲ್ಯ ಮತ್ತು ಕರಕುಶಲ ವಸ್ತುಗಳನ್ನು ಪ್ರದರ್ಶಿಸಲಿದೆ.

ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯ ಫಲಾನುಭವಿಗಳಿಗೆ ಮಾರುಕಟ್ಟೆ ಅವಕಾಶ ಹೆಚ್ಚಿಸಲು, ಲಭ್ಯತೆ ಸುಧಾರಿಸಲು ಮತ್ತು ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸಲು ಹಾತ್ ಪ್ರಯತ್ನಿಸಲಿದೆ. ಪ್ರಧಾನಮಂತ್ರಿ ವಿಶ್ವಕರ್ಮ ಹಾತ್ ೨೦೨೬ ಕ್ಕೆ ವಿದೇಶಿ ಮಿಷನ್ ಗಳ ಪ್ರತಿನಿಧಿಗಳನ್ನು ಸಹ ಆಹ್ವಾನಿಸಲಾಗಿದೆ. ಪ್ರದರ್ಶನ ಬೆಳಗ್ಗೆ ೧೦.೩೦ ರಿಂದ ರಾತ್ರಿ ೧೦ ರವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರಲಿದೆ.

<>><><*><><<>

ಪಶ್ಚಿಮ ಬಂಗಾಳದ ಮಾಲ್ಡಾ ಪಟ್ಟಣದ ರೈಲು ನಿಲ್ದಾಣದಲ್ಲಿ ಹೌರಾ ಮತ್ತು ಗುವಾಹಟಿ ನಡುವಿನ ಭಾರತದ ಮೊದಲ ವಂದೇ ಭಾರತ್ ಸ್ಲೀಪರ್ ಕೋಚ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ನಿನ್ನೆ ವರ್ಚುವಲ್ ಮೂಲಕ ಹಸಿರು ನಿಶಾನೆ ತೋರಿದರು. ಸಂಪೂರ್ಣ ಹವಾನಿಯಂತ್ರಿತ ವಂದೇ ಭಾರತ್ ಸ್ಲೀಪರ್ ಕೋಚ್ ರೈಲು ಪ್ರಯಾಣಿಕರಿಗೆ ಕಡಿಮೆ ದರದಲ್ಲಿ ವಿಮಾನಯಾನದಂತಹ ಪ್ರಯಾಣದ ಅನುಭವವನ್ನು ನೀಡಲು ಸಜ್ಜಾಗಿದೆ. ಇದು ದೀರ್ಘ ಪ್ರಯಾಣವನ್ನು ವೇಗವಾಗಿ, ಸುರಕ್ಷಿತವಾಗಿ ಮತ್ತು ಹೆಚ್ಚು ಅನುಕೂಲಕರವಾಗಿಸುತ್ತದೆ. ವಂದೇ ಭಾರತ್ ಸ್ಲೀಪರ್ ಕೋಚ್ ರೈಲು ಒಟ್ಟು ೮೨೩ ಪ್ರಯಾಣಿಕರ ಸಾಮರ್ಥ್ಯವನ್ನು ಹೊಂದಿರುವ ೧೬ ಆಧುನಿಕ ಬೋಗಿಗಳನ್ನು ಒಳಗೊಂಡಿದೆ. ಈ ಸೇವೆಯು ಸಾಮಾನ್ಯ ಪ್ರಯಾಣಿಕರು, ವಿದ್ಯಾರ್ಥಿಗಳು, ವೃತ್ತಿಪರರು, ವಲಸೆ ಕಾರ್ಮಿಕರು, ವ್ಯಾಪಾರಿಗಳು ಮತ್ತು ಧಾರ್ಮಿಕ ಯಾತ್ರಿಕರಿಗೆ ವಿಶೇಷವಾಗಿ ಪ್ರಯೋಜನಕಾರಿಯಾಗಲಿದೆ ಎಂದು ವರದಿಯಾಗಿದೆ. ಗಂಟೆಗೆ ೧೮೦ ಕಿಲೋಮೀಟರ್ ವೇಗವನ್ನು ಹೊಂದಿರುವ ಅರೆ-ಹೈ-ಸ್ಪೀಡ್ ರೈಲು, ವಂದೇ ಭಾರತ್ ಸ್ಲೀಪರ್ ಕೋಚ್ ರೈಲು ಆಧುನಿಕ ಸೌಲಭ್ಯಗಳನ್ನು ವೇಗದ ಪ್ರಯಾಣವನ್ನು ಸಮಯದೊಂದಿಗೆ ಸಂಯೋಜಿಸುತ್ತದೆ.

<>><><*><><<>

ಭಾರತ-ಕೆನಡಾ ಆರ್ಥಿಕ ಪಾಲುದಾರಿಕೆಯನ್ನು ಬಲಪಡಿಸುವ ಕುರಿತು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ಬ್ರಿಟಿಷ್ ಕೊಲಂಬಿಯಾ ಕೆನಡಾದ ಪ್ರೀಮಿಯರ್ ಡೇವಿಡ್ ಎಬಿ ಅವರೊಂದಿಗೆ ನಿನ್ನೆ ಚರ್ಚೆ ನಡೆಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಗೋಯಲ್ ಅವರು ವ್ಯಾಪಾರ ಮತ್ತು ಹೂಡಿಕೆ ಸಹಕಾರವನ್ನು ಮುಂದುವರಿಸುವುದು, ನಿರ್ಣಾಯಕ ಖನಿಜಗಳು, ಉತ್ಪಾದನೆ, ಶುದ್ಧ ಇಂಧನ, ತಂತ್ರಜ್ಞಾನ, ಶಿಕ್ಷಣ, ರಕ್ಷಣೆ ಮತ್ತು ನಾವಿನ್ಯತೆ ಮುಂತಾದ ಕ್ಷೇತ್ರಗಳಲ್ಲಿ ಸಹಯೋಗವನ್ನು ಅನ್ವೇಷಿಸುವ ಬಗ್ಗೆ ಚರ್ಚಿಸಲಾಯಿತು ಎಂದರು. ಹೊಸ ಅವಕಾಶಗಳನ್ನು ಅನ್ವೇಷಿಸಲು ಮತ್ತು ಎರಡೂ ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಗಾಢವಾಗಿಸಲು ನಿರಂತರ ಸಹಯೋಗದ ಮಹತ್ವವನ್ನು ಎರಡೂ ದೇಶಗಳು ಪುನರುಚ್ಚರಿಸಿವೆ ಎಂದು ಅವರು ಹೇಳಿದ್ದಾರೆ.

<>><><*><><<>

ಕೇಂದ್ರ ಗೃಹ ಸಚಿವ ಅಮಿತ್ ಶಾ ನಿನ್ನೆ ನವದೆಹಲಿಯಲ್ಲಿ ಭಾರತ್ ಮಂಟಪದಲ್ಲಿ ನಡೆಯುತ್ತಿರುವ ನವದೆಹಲಿ ವಿಶ್ವ ಪುಸ್ತಕ ಮೇಳ ೨೦೨೬ಕ್ಕೆ ಭೇಟಿ ನೀಡಿದರು.  ಈ ಭೇಟಿಯ ಸಂದರ್ಭದಲ್ಲಿ ಅವರು, ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಪ್ರಕಾಶಕರು, ಬರಹಗಾರರು ಮತ್ತು ಸಂದರ್ಶಕರೊಂದಿಗೆ ಸಂವಾದ ನಡೆಸಿದರು.  ಭೇಟಿಯ ಸಮಯದಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಉಪಸ್ಥಿತರಿದ್ದರು. ವಿಶ್ವ ಪುಸ್ತಕ ಮೇಳದ ೫೩ನೇ ಆವೃತ್ತಿಯು ಇಂದು ಮುಕ್ತಾಯಗೊಳ್ಳಲಿದೆ.

<>><><*><><<>

ಪಶ್ಚಿಮ ಬಂಗಾಳದ ಮಾಲ್ಡಾದಲ್ಲಿ ತೃಣಮೂಲ ಕಾಂಗ್ರೆಸ್-ಟಿಎಂಸಿ ಸರ್ಕಾರದ ಮೇಲೆ ಪ್ರಧಾನಿ ನರೇಂದ್ರ ಮೋದಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಕ್ರಮ ಒಳನುಸುಳುವಿಕೆ ರಾಜ್ಯದ ಅತ್ಯಂತ ಗಂಭೀರ ಸವಾಲು ಎಂದಿರುವ ಪ್ರಧಾನಿ, ಇದು ಪ್ರಾದೇಶಿಕ ಜನಸಂಖ್ಯಾಶಾಸ್ತ್ರ ಮತ್ತು ಸ್ಥಳೀಯ ಭಾಷೆಗಳನ್ನು ಬದಲಾಯಿಸುತ್ತಿರುವ ನಿರ್ಣಾಯಕ ಹಂತವನ್ನು ತಲುಪಿದೆ ಎಂದು ಆತಂಕ ವ್ಯಕ್ತಪಡಿಸಿದರು. ಅನೇಕ ಶ್ರೀಮಂತ ರಾಷ್ಟ್ರಗಳು ಅಕ್ರಮ ವಲಸಿಗರನ್ನು ಸಕ್ರಿಯವಾಗಿ ಗಡಿಪಾರು ಮಾಡುತ್ತಿದ್ದರೆ, ಟಿಎಂಸಿ ಸರ್ಕಾರ ರಾಜಕೀಯ ಕಾರಣಗಳಿಗಾಗಿ ಈ ಕಾರ್ಯದಲ್ಲಿ ವಿಫಲವಾಗಿದೆ ಎಂದು ಪ್ರಧಾನಿ, ಈ ಸಮಸ್ಯೆಯು, ರಾಜ್ಯದ ಯುವಕರಿಗೆ ಉದ್ಯೋಗಾವಕಾಶಗಳ ಕೊರತೆಗೆ ನೇರವಾಗಿ ಸಂಬಂಧಿಸಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆಯುಷ್ಮಾನ್ ಭಾರತ್, ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಮತ್ತು ಜಲ ಜೀವನ್ ಮಿಷನ್‌ನಂತಹ ಕೇಂದ್ರ ಕಲ್ಯಾಣ ಯೋಜನೆಗಳಿಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ಪ್ರಧಾನಿ ಆರೋಪಿಸಿದರು.

<>><><*><><<>

ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಇದೇ ೨೮ ರಂದು ಹೈದರಾಬಾದ್‌ನ ಬೇಗಂಪೇಟ್ ವಿಮಾನ ನಿಲ್ದಾಣದಲ್ಲಿ ಏಷ್ಯಾದ ಅತಿದೊಡ್ಡ ನಾಗರಿಕ ವಿಮಾನಯಾನ ಕಾರ್ಯಕ್ರಮವಾದ ವಿಂಗ್ಸ್ ಇಂಡಿಯಾ ೨೦೨೬ ಅನ್ನು ಉದ್ಘಾಟಿಸಲಿದ್ದಾರೆ. ನಾಲ್ಕು ದಿನಗಳ ಈ ಜಾಗತಿಕ ವಿಮಾನಯಾನ ಕಾರ್ಯಕ್ರಮದ ವಿಷಯ ಭಾರತೀಯ ವಿಮಾನಯಾನ: ಭವಿಷ್ಯವನ್ನು ಸುಗಮಗೊಳಿಸುವುದು - ವಿನ್ಯಾಸದಿಂದ ನಿಯೋಜನೆಯವರೆಗೆ, ಉತ್ಪಾದನೆಯಿಂದ ನಿರ್ವಹಣೆಗೆ, ನಾವೀನ್ಯತೆಗೆ ಒಳಗೊಳ್ಳುವಿಕೆ ಮತ್ತು ಸುರಕ್ಷತೆಯಿಂದ ಸುಸ್ಥಿರತೆಯೆಡೆಗೆ ಎಂಬುದಾಗಿದೆ.

ಈ ಕಾರ್ಯಕ್ರಮ, ಭಾರತದ ವೇಗವಾಗಿ ವಿಸ್ತರಿಸುತ್ತಿರುವ ವಾಯುಯಾನ ಕ್ಷೇತ್ರ, ಅದರ ಬೆಳೆಯುತ್ತಿರುವ ಜಾಗತಿಕ ಹೆಜ್ಜೆಗುರುತು ಮತ್ತು ಉತ್ಪಾದನೆ, ಸೇವೆಗಳು, ನಾವೀನ್ಯತೆ ಮತ್ತು ಸುಸ್ಥಿರ ವಾಯುಯಾನ ಪರಿಹಾರಗಳಿಗೆ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುವ ಅದರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ. ಅಂತರರಾಷ್ಟ್ರೀಯ ಪ್ರದರ್ಶನ, ಸ್ಥಿರ ವಿಮಾನ ಪ್ರದರ್ಶನಗಳು, ಹಾರುವ ಮತ್ತು ಏರೋಬ್ಯಾಟಿಕ್ ಪ್ರದರ್ಶನಗಳು, ಉನ್ನತ ಮಟ್ಟದ ಅಂತಾರಾಷ್ಟ್ರೀಯ ಸಮ್ಮೇಳನ, ವಾಯುಯಾನ ಉದ್ಯೋಗ ಮೇಳ, ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಈ ಕಾರ್ಯಕ್ರಮ ಒಳಗೊಂಡಿರುತ್ತದೆ. ವಿದ್ಯಾರ್ಥಿಗಳು ಮತ್ತು ಯುವ ವೃತ್ತಿಪರರಲ್ಲಿ ನಾವೀನ್ಯತೆ, ಸಮಸ್ಯೆ ಬಗೆಹರಿಸುವಿಕೆ ಮತ್ತು ಉದ್ಯಮ-ಆಧಾರಿತ ಚಿಂತನೆಯನ್ನು ಉತ್ತೇಜಿಸಲು ವಿದ್ಯಾರ್ಥಿಗಳಿಗೆ ವಿಶೇಷವಾಗಿ ಕ್ಯುರೇಟೆಡ್ ನಾಗರಿಕ ವಿಮಾನಯಾನ ನಾವೀನ್ಯತೆ ಸವಾಲನ್ನು ಆಯೋಜಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.

<>><><*><><<>

೪೦ ಕಾಮನ್‌ವೆಲ್ತ್ ದೇಶಗಳಿಂದ ೧೨೦ ಸದಸ್ಯರ ಸಂಸದೀಯ ನಿಯೋಗವು ಎರಡು ದಿನಗಳ ಭೇಟಿಗಾಗಿ ನಿನ್ನೆ ಜೈಪುರಕ್ಕೆ ಆಗಮಿಸಿತು. ಐತಿಹಾಸಿಕ ಅಮೇರ್ ಕೋಟೆಗೆ ಭೇಟಿ ನೀಡಿದ ಪ್ರತಿನಿಧಿಗಳಿಗೆ ಸಾಂಪ್ರದಾಯಿಕ ರಾಜಸ್ಥಾನಿ ಸ್ವಾಗತ ದೊರೆಯಿತು. ಕೋಟೆಯ ಭವ್ಯ ವಾಸ್ತುಶಿಲ್ಪ, ಸಾಂಸ್ಕೃತಿಕ ಪ್ರದರ್ಶನ ಮತ್ತು ಜಾನಪದ ಸಂಗೀತವು ಸಂದರ್ಶಕರನ್ನು ಪ್ರಭಾವಿತಗೊಳಿಸಿತು. ಕೋಟೆಯ ರಜಪೂತ ಯುಗದ ಇತಿಹಾಸದ ಬಗ್ಗೆ ನಿಯೋಗಕ್ಕೆ ವಿವರಿಸಲಾಯಿತು. ಶೀಶ್ ಮಹಲ್‌ನ ಸಂಕೀರ್ಣವಾದ ಕನ್ನಡಿ ವಿನ್ಯಾಸ ಮತ್ತು ಮಾವೋಟಾ ಸರೋವರದ ರಮಣೀಯ ನೋಟಗಳು ಅತಿಥಿಗಳನ್ನು ವಿಶೇಷವಾಗಿ ಆಕರ್ಷಿಸಿದವು, ಅವರು ಅಮೇರ್ ಅನ್ನು ಭಾರತದ ಸಾಂಸ್ಕೃತಿಕ ಪರಂಪರೆಯ ಜೀವಂತ ಸಂಕೇತವೆಂದು ಹೊಗಳಿದರು. ಕಾಮನ್‌ವೆಲ್ತ್ ರಾಷ್ಟ್ರಗಳ ಸ್ಪೀಕರ್‌ಗಳು, ಸದಸ್ಯರು ಮತ್ತು ಹಿರಿಯ ಸಂಸದೀಯ ಅಧಿಕಾರಿಗಳನ್ನು ಒಳಗೊಂಡ ನಿಯೋಗವನ್ನು ಜೈಪುರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾಜಸ್ಥಾನ ವಿಧಾನಸಭಾ ಸ್ಪೀಕರ್ ವಾಸುದೇವ್ ದೇವ್ನಾನಿ ಸ್ವಾಗತಿಸಿದರು. ಪ್ರವಾಸದ ಸಂದರ್ಭದಲ್ಲಿ ನಿಯೋಗವು ನಗರದ ಇತರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸ್ಥಳಗಳಿಗೆ ಸಹ ಭೇಟಿ ನೀಡಲಿದೆ.

<>><><*><><<>

ಜಿಂಬಾಬ್ವೆಯ ಬುಲವಾಯೊದಲ್ಲಿರುವ ಕ್ವೀನ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ೨೦೨೬ರ ಐಸಿಸಿ ಪುರುಷರ ೧೯ ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಯಲ್ಲಿ, ನಿನ್ನೆ ತನ್ನ ಆರಂಭಿಕ ಪಂದ್ಯದಲ್ಲಿ ಭಾರತ, ಯುಎಸ್‌ಎ ವಿರುದ್ಧ ಜಯಗಳಿಸಿದೆ. ಮಳೆಯಿಂದಾಗಿ ಪಂದ್ಯವನ್ನು ೩೭ ಓವರ್‌ಗಳಿಗೆ ಕಡಿತಗೊಳಿಸಲಾದ ಪಂದ್ಯದಲ್ಲಿ ಭಾರತಕ್ಕೆ, ಡಕ್ವರ್ತ್ ಲೂಯಿಸ್ ನಿಯಮದ ಅನುಸಾರ ೯೬ ರನ್‌ಗಳ ಪರಿಷ್ಕೃತ ಗುರಿಯನ್ನು ನೀಡಲಾಯಿತು. ಗುರಿ ಬೆನ್ನಟ್ಟಿದ ಆಯುಷ್ ಮಾತ್ರೆ ನೇತೃತ್ವದ ಯುವ ಭಾರತೀಯ ತಂಡ, ೬ ವಿಕೆಟ್‌ಗಳಿಂದ ಯುಎಸ್‌ಎಯನ್ನು ಸೋಲಿಸಿತು. ಭಾರತದ ಹೆನಿಲ್ ಪಟೇಲ್ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ಪಡೆದರು. ಭಾರತವು ಎ ಗುಂಪಿನ ಮತ್ತೊಂದು ಪಂದ್ಯದಲ್ಲಿ, ಬಾಂಗ್ಲಾದೇಶ ವಿರುದ್ಧದ ತನ್ನ ಎರಡನೇ ಪಂದ್ಯಕ್ಕೆ ಇಂದು ಮತ್ತೆ ಕಣಕ್ಕಿಳಿಯಲಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>